# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1151**

**ಉತ್ತರಿಸಬೇಕಾದ ದಿನಾಂಕ : 18-03-2025**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರ ಜಿಲ್ಲೆಗಳಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಂಬಂಧಿತ ಸಾಲ ಪಡೆದುಕೊಂಡಿರುವ ರೈತರ ಸಂಖ್ಯೆ ಹಾಗೂ ನೀಡಲಾಗಿರುವ ಸಾಲದ ಮೊತ್ತ ಎಷ್ಟು: (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರ ಜಿಲ್ಲೆಗಳಲ್ಲಿ ದಿನಾಂಕ:28-2-2025 ರವರೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ 606 ರೈತರು ರೂ.21.23 ಕೋಟಿ ಮತ್ತು ಪಿಕಾರ್ಡ್ ಬ್ಯಾಂಕುಗಳ ಮೂಲಕ 2687 ರೈತರು ರೂ.39.52 ಕೋಟಿಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಂಬಂಧಿತ ಸಾಲ ಪಡೆದುಕೊಂಡು ಹೊರಬಾಕಿ ಹೊಂದಿರುತ್ತಾರೆ.<br><br>ತಾಲ್ಲೂಕವಾರು ವಿವರವನ್ನು ಅನುಬಂಧ ದಲ್ಲಿ ಸಲ್ಲಿಸಿದೆ. |
| ಆ) | ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳ ಅಸಲು ಪಾವತಿಸಿದ ಸಾಲದ ಮೇಲಿನ ಬಡ್ಡಿ ಮನ್ನಾ ಪ್ರಯೋಜನ ಪಡೆದುಕೊಂಡಿರುವ ರೈತರ ಸಂಖ್ಯೆ ಎಷ್ಟು: (ವಿವರ ನೀಡುವುದು) | ಸಹಕಾರ ಸಂಘಗಳಿಂದ ರೈತರು ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ಪಡೆದು ದಿ.31-12-2023 ಕ್ಕೆ ಸುಸ್ತಿಯಾಗಿರುವ ಕಂತುಗಳ ಅಸಲನ್ನು ದಿ.31-3-2024 ರೊಳಗೆ ಸಂಬಂಧಪಟ್ಟ ಪತ್ತಿನ ಸಹಕಾರ ಸಂಘ/ಬ್ಯಾಂಕುಗಳಿಗೆ ಪೂರ್ತಿಯಾಗಿ ಮರುಪಾವತಿಸಿದಲ್ಲಿ ಬಾಕಿ ಇರುವ ಬಡ್ಡಿಯನ್ನು ಮನ್ನಾ ಮಾಡುವ ಯೋಜನೆಯಡಿಯಲ್ಲಿ ಕಲಬುರಗಿ ಮತ್ತು ಯಾದಗಿರ ಜಿಲ್ಲೆಗಳಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ 1361 ರೈತರು ರೂ.37.43 ಕೋಟಿಗಳ ಕಂತುಗಳನ್ನು ಪಾವತಿಸಲು ಸುಸ್ತಿ ಆಗಿದ್ದು, ಈ ಪೈಕಿ 528 ರೈತರು ರೂ.18.12 ಕೋಟಿಗಳ ಸುಸ್ತಿ ಅಸಲನ್ನು ಪಾವತಿಸಿ ರೂ.18.63 ಕೋಟಿಗಳ ಬಡ್ಡಿ ಮನ್ನಾ ಪ್ರಯೋಜನ ಪಡೆದಿರುತ್ತಾರೆ.<br>ಪಿಕಾರ್ಡ್ ಬ್ಯಾಂಕುಗಳಲ್ಲಿ 1317 ರೈತರು ರೂ.7.98 ಕೋಟಿಗಳ ಕಂತುಗಳನ್ನು ಪಾವತಿಸಲು ಸುಸ್ತಿ ಆಗಿದ್ದು, ಈ ಪೈಕಿ 868 ರೈತರು ರೂ.5.24 ಕೋಟಿಗಳ ಸುಸ್ತಿ ಅಸಲನ್ನು ಪಾವತಿಸಿ ರೂ.4.33 ಕೋಟಿಗಳ ಬಡ್ಡಿ ಮನ್ನಾ ಪ್ರಯೋಜನ ಪಡೆದಿರುತ್ತಾರೆ.<br><br>ಜಿಲ್ಲಾವಾರು ವಿವರವನ್ನು ಅನುಬಂಧ ದಲ್ಲಿ ಸಲ್ಲಿಸಿದೆ. |

| | | |
|---|---|---|
| ಇ | ಸಾಲ ಮರು ಪಾವತಿಸಲು ರೈತರು ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಹಿನ್ನಲೆಯಲ್ಲಿ ರೈತರಿಗೆ ಸಹಕಾರ ಸಂಸ್ಥೆಗಳಿಗೆ ಶೂನ್ಯ ಬಡ್ಡಿದರದಲ್ಲಿ ನೀಡಲಾಗಿರುವ ಅಲ್ಪಾವಧಿ ಸಾಲವನ್ನು ಮನ್ನಾ ಮಾಡಲಾಗಿದೆಯೇ: ಎಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ? (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರ ಜಿಲ್ಲೆಗಳಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ದಿ.28-02-2025 ರ ಅಂತ್ಯಕ್ಕೆ 1,98,891 ರೈತರು ರೂ.885.38 ಕೋಟಿಗಳ ಅಲ್ಪಾವಧಿ ಕೃಷಿ ಸಾಲ ಹೊರಬಾಕಿ ಹೊಂದಿದ್ದು, ಈ ಪೈಕಿ 32415 ರೈತರು ರೂ.152.44 ಕೋಟಿಗಳ ಸಾಲ ಪಾವತಿಸಲು ಸುಸ್ತಿಯಾಗಿರುತ್ತಾರೆ.<br><br>2018-19 ನೇ ಸಾಲಿನ ಬೆಳೆ ಸಾಲ ಮನ್ನಾ ಯೋಜನೆಯಡಿಯಲ್ಲಿ ಈ ಜಿಲ್ಲೆಗಳ 52791 ರೈತರಿಗೆ ರೂ.139.05 ಕೋಟಿಗಳ ಸಾಲ ಮನ್ನಾ ಪ್ರಯೋಜನೆ ದೊರೆತಿದ್ದು, ದಿ.28-02-2025 ಕ್ಕೆ ಹೊರಬಾಕಿ ಹೊಂದಿರುವ ರೈತರ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವೆ ಇರುವುದಿಲ್ಲ. |

**ಸಂಖ್ಯೆ: ಸಿಒ 82 ಸಿಎಲ್ಎಸ್ 2025**

K-N Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**

# ಅನುಬಂಧ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1151 ಕ್ಕೆ ಮಾಹಿತಿ**

**ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ಸಹಕಾರ ಸಂಘಗಳಲ್ಲಿ ದಿ.28-02-2025 ಕ್ಕೆ ಇದ್ದು ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ**

(ರೂ.ಕೋಟಿಗಳಲ್ಲಿ)

| ಕ್ರ ಸಂಖ್ಯೆ | ತಾಲೂಕು | ದಿನಾಂಕ 28.02.2025 ಕ್ಕೆ ಹೊರಬಾಕಿ | | | | ದಿನಾಂಕ 28.02.2025 ಕ್ಕೆ ಸುಸ್ತಿ ಬಾಕಿ | | | |
|---|---|---|---|---|---|---|---|---|---|
| | | ಪ್ಯಾಕ್ಸ್ ಗಳ ಮೂಲಕ | | ಪಿಕಾರ್ಡ್ ಬ್ಯಾಂಕ್ ಗಳ ಮೂಲಕ | | ಪ್ಯಾಕ್ಸ್ ಗಳ ಮೂಲಕ | | ಪಿಕಾರ್ಡ್ ಬ್ಯಾಂಕ್ ಗಳ ಮೂಲಕ | |
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಕಲಬುರಗಿ | 69 | 3.42 | 172 | 1.98 | 69 | 3.42 | 127 | 1.01 |
| 2 | ಆಳಂದ | 123 | 4.32 | 271 | 2.59 | 121 | 4.17 | 167 | 1.01 |
| 3 | ಅಫಜಲಪೂರ | 128 | 3.32 | 223 | 4.54 | 128 | 3.28 | 11 | 0.08 |
| 4 | ಜೇವರ್ಗಿ | 121 | 5.16 | 370 | 5.2 | 120 | 5.09 | 146 | 0.98 |
| 5 | ಚಿತ್ತಾಪೂರ | 73 | 2.09 | 191 | 2.36 | 68 | 2.02 | 120 | 0.21 |
| 6 | ಚಿಂಚೋಳಿ | 51 | 1.26 | 459 | 3.55 | 51 | 1.26 | 294 | 1.13 |
| 7 | ಸೇಡಂ | 3 | 0.09 | 172 | 3.18 | 3 | 0.09 | 22 | 0.05 |
| 8 | ಯಾದಗೀರ | 2 | 0.12 | 184 | 3.99 | 2 | 0.12 | 15 | 0.11 |
| 9 | ಶಹಾಪೂರ | 34 | 1.34 | 313 | 5.68 | 34 | 1.34 | 22 | 0.45 |
| 10 | ಶೋರಾಪೂರ | 2 | 0.11 | 332 | 6.46 | 2 | 0.11 | 47 | 0.42 |
| | **ಒಟ್ಟು** | **606** | **21.23** | **2687** | **39.52** | **598** | **20.9** | **971** | **5.45** |

**ದಿ.31-12-2023 ರ ಅಂತ್ಯಕ್ಕೆ ಸುಸ್ತಯಾಗಿ ಮಧ್ಯಮಾವಧಿ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಲಾಭ ಪಡೆದ ರೈತರ ವಿವರ.**

ರೂ ಕೋಟಿಗಳಲ್ಲಿ

| ಸಂಘದ ವಿಧ | ಜಿಲ್ಲೆಯ ಹೆಸರು | ದಿ.31.12.2023 ಕ್ಕೆ ಸುಸ್ತಿ ಬಾಕಿ ಅಸಲು | | ಸುಸ್ತಿ ಅಸಲು ಮರುಪಾವತಿಸಿದ ರೈತರ ಸಂಖ್ಯೆ | | |
|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಬಡ್ಡಿ ಮನ್ನಾ ಮೊತ್ತ |
| ಪ್ಯಾಕ್ಸ್ ಗಳ ಮೂಲಕ | ಕಲಬುರಗಿ | 1266 | 33.44 | 464 | 15.76 | 16.44 |
| | ಯಾದಗೀರ | 95 | 3.99 | 64 | 2.36 | 2.19 |
| | **ಒಟ್ಟು** | **1361** | **37.43** | **528** | **18.12** | **18.63** |
| ಪಿಕಾರ್ಡ್ ಬ್ಯಾಂಕ್‌ಗಳ ಮೂಲಕ | ಕಲಬುರಗಿ | 1097 | 5.88 | 704 | 4.31 | 3.46 |
| | ಯಾದಗೀರ | 220 | 2.18 | 164 | 0.93 | 0.87 |
| | **ಒಟ್ಟು** | **1317** | **7.98** | **868** | **5.24** | 4.34 |
| ಒಟ್ಟು ಕ್ರೂಢೀಕೃತ | | **2678** | **45.41** | **1396** | **23.36** | **22.97** |

**ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ಪ್ಯಾಕ್ಸ್ ಗಳಲ್ಲಿ ದಿ.28-02-2025 ಕ್ಕೆ ಇರುವ ಅಲ್ಪಾವಧಿ ಕೃಷಿ ಸಾಲ**

ರೂ ಕೋಟಿಗಳಲ್ಲಿ

| ಕ್ರ.ಸಂ | ಜಿಲ್ಲೆ ಹೆಸರು | ದಿ.28.02.2025 ಕ್ಕೆ ಹೊರಬಾಕಿ | | ಈ ಪೈಕಿ ಸುಸ್ತಿ ಬಾಕಿ | |
|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಕಲಬುರಗಿ | 147231 | 669.35 | 26620 | 125.14 |
| 2 | ಯಾದಗೀರ | 51660 | 216.03 | 5795 | 27.30 |
| | **ಒಟ್ಟು** | **198891** | **885.38** | **32415** | **152.44** |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)